


**ಈಗ ಸೀರೆ ಉಡುಗೊರೆ ಕೊಟ್ಟರೆ ಮೊದಲಿನಂತೆ ಖುಷಿ ಪಡುವವರಿಲ್ಲ. ಯಾಕಪ್ಪಾ ಸೀರೆ ಕೊಡುತ್ತಾರೆ, ಇವನ್ನು ವಿಲೇವಾರಿ ಮಾಡೋದಾದರೂ ಹೇಗೆ ಎಂದು ಚಿಂತೆಗೆ ಬೀಳುವವರೇ ಹೆಚ್ಚು. ಈ ಸೀರೆಯನ್ನು ಯಾರಿಗೆ ದಾಟಿಸಬಹುದೆಂಬ ಲೆಕ್ಕಾಚಾರವೂ ಆಗಲೇ ಶುರುವಾಗಿಬಿಟ್ಟಿರುತ್ತದೆ.**

**■ ನಳಿನಿ ಟಿ. ಭೀಮಪ್ಪ**

'ಉಡಿಯಕ್ಕಿ ಹಾಕ್ತೀವಿ' ಉಟ್ಕೊಂಡು ಬಾರವ್ವಾ' ಎನ್ನುತ್ತಿದ್ದ ಹಾಗೆ 'ಯಪ್ಪಾ ಈ ಸೀರಿ ಗೀರಿ ಮಾತ್ರ ನಾ ಒಲ್ಲೆನೋ ಯಪ್ಪಾ. ಮನಿತುಂಬ ನಾಕು ಬೀರು ತುಂತಾವೆ. ನನ್ನ ಸೊಸಿ ತಿಂಗಳಿಗೆ ನಾಕು ಸೀರಿ ಖರೀದಿ ಮಾಡ್ತಾಳೆ. ಒಂದೊಂದರ ರೇಟು ಕೇಳಿದ್ರ ಎದೀ ಹೊಡ್ಕೊಳ್ಳೋದಾ ನಿಂತು ಹೋಗ್ತದ. ಅವುಗಳನ್ನ ನಾಕು ಸರ್ತಿ ಉಟ್ಟು, ನಾನೂರು ಫೋಟಾ ತಕ್ಕಂಡು, ಅತ್ಲೇ ಇನ್ನ್ಯಾಗೆ ಈ ಸೀರಿಗೆ ನೀವೇ ಬ್ಯಾರೆ ಬ್ಲೌಸ್ ಹೊಲಿಸ್ಕಂಡು ಉಟ್ಕಳ್ರೀ ಅಂತ ನನ್ನ ಬೀರೂನಾಗ ಇಡ್ತಾಳ. ನಾನು ಈ ಕುಂಟುಕಾಲು ಇಟ್ಕೊಂಡು ಏಟು ಫಂಕ್ಷನ್ನಿಗೆ ಹೋಗೋಕ್ಕಾಕೇತಿ ಹೇಳು. ಹಂಗಾಗಿ ಇರೋವುನ್ನೇ ಉಟ್ರೆ ಸಾಕಾಗೇತೋ ಯಪ್ಪಾ, ಅದರ ಬದ್ಲಿಗೆ ಅದರ ರೊಕ್ಕಾ ಕೊಟ್ಬುಡು, ನನ್ನ ಕಡೀ ಇರೋ ರೊಕ್ಕ ಹಾಕಿ ಚೂರೂ ಪಾರೂ ಬಂಗಾರ ತೋಗೋತೇನಿ, ಬ್ಲೌಸ್ ಪೀಸ್ ಇಟ್ಟು ಉಡಿಯಕ್ಕಿ ಹಾಕು' ಅಂತ ಗೋಳಾಡುತ್ತಿದ್ದುದನ್ನು ನೋಡಿ ನಗಬೇಕೋ ಅಳಬೇಕೋ ತಿಳಿಯಲಿಲ್ಲ. ಕೊನೆಗೆ ಅವರು ಹಾಗೇ ಮಾಡಿ ಬ್ಲೌಸ್ ಪೀಸಿನಲ್ಲಿ ಹತ್ತು ಸಾವಿರ ಇಟ್ಟು ಉಡಿ ತುಂಬಿದರು.

ಬರೀ ನಮ್ಮ ಹೆಣ್ಣುಮಕ್ಕಳು ಸೀರೆ ಬೇಡಾ ಎನ್ನುತ್ತಾರೆ ಎಂದರೆ ತಪ್ಪಾಗುತ್ತದೆ. ಹೆಣ್ಣು ದೇವರುಗಳಿಗೂ ಇತ್ತೀಚೆಗೆ ಅಂತಿಂಥ ಸೀರೆ ಕೊಡುವುದಕ್ಕೆ ಹೋದರೆ ಪೂಜಾರಿಗಳೇ ತೆಗೆದುಕೊಳ್ಳುವುದಿಲ್ಲ. ಅಂಗಡಿಯಲ್ಲಿ ದೇವರ ಸೀರೆ ಅಂತಲೇ ಸಿಗುತ್ತವೆ. ಅವೂ 50 ರೂಪಾಯಿಯಿಂದ ಸಾವಿರಾರು ರೂಪಾಯಿ ತನಕ ಸಿಗುತ್ತವೆ. ಪಾಪ ದೇವಿಗೂ ಬಹುತೇಕ ಜನ ಕೊಟ್ಟ ಹಾಗೂ ಇರಬೇಕು ಬಿಟ್ಟ ಹಾಗೂ ಇರಬೇಕು ಎನ್ನುವಂತೆ ಕಡಿಮೆ ಬೆಲೆಯ ಸೀರೆ ಕೊಟ್ಟು ಸೀರೆ ಉಡಿಸಿದ ಶಾಸ್ತ್ರ ಮುಗಿಸಿಬಿಡುತ್ತಾರೆ. ಅವು ಉದ್ದವೂ ಇರುವುದಿಲ್ಲ, ಅಗಲವೂ ಇರುವುದಿಲ್ಲ, ಉಡಿಸಲು ಹೋದರೆ ಅಲ್ಲಲ್ಲೇ ಹರಿದುಹೋಗುವುದು ಗ್ಯಾರಂಟಿ.

ಉಡುವ ಹಾಗೂ ಇಲ್ಲ, ಬಿಸಾಡುವ ಹಾಗೂ ಇಲ್ಲವಾದ್ದರಿಂದ ಅಂತಹ ಸೀರೆಗಳನ್ನು ಸುಮ್ಮನೆ ಗಂಟು ಕಟ್ಟೀ ಕಟ್ಟೀ ಅಟ್ಟದ ಮೇಲೆ ಒಗೆದಿರುತ್ತಾರೆ. ಕೆಲವು ದೇವಸ್ಥಾನಗಳಲ್ಲಂತೂ ಹೊರಗೆ ಅಂಗಡಿಯಲ್ಲಿ ಕೊಂಡು ತಂದು ದೇವಸ್ಥಾನಕ್ಕೆ ಕೊಟ್ಟ ಸೀರೆಗಳು, ರಾತ್ರಿಯ ಹೊತ್ತಿಗೆ ಮತ್ತೆ ಅವೇ ಅಂಗಡಿಗಳಿಗೆ ವಾಪಸು ತಲುಪುವುದೂ ಉಂಟು. ಹಾಗಾಗಿ ಇತ್ತೀಚೆಗೆ ದೇವಸ್ಥಾನಗಳಲ್ಲಿ ಕೊಡುವ ಹಾಗಿದ್ದರೆ ಒಳ್ಳೆಯ ಸೀರೆಗಳನ್ನು ಕೊಡಿ, ಅಂತಿಂತಹ ಸೀರೆಗಳನ್ನು ತೆಗೆದುಕೊಳ್ಳುವುದಿಲ್ಲ ಎಂದು ಬೋರ್ಡ್ ಹಾಕಿದ ಗುಡಿಗಳನ್ನೂ ನೋಡಬಹುದು. ಇಲ್ಲವಾದರೆ ಪರಿಚಯಸ್ಥರಿಗೆ ಸೀರೆಯ ಬದಲು ಹಣ, ದೀಪ, ಗಂಟೆ, ಹೀಗೆ ದೇವಸ್ಥಾನಕ್ಕೆ ಉಪಯೋಗವಾಗುವ ಯಾವುದಾದರೂ ವಸ್ತುಗಳನ್ನು ಕೊಡಿಸಿ ಎಂದು ಹೇಳಿಬಿಡುತ್ತಾರೆ.

ಅದೇ ರೀತಿ ಕೆಲವು ಕಡೆ ಸೀಮಂತ ಶಾಸ್ತ್ರದಲ್ಲಿ, ಬಸುರಿ ಹೆಣ್ಣುಮಗಳಿಗೆ ಪ್ರತಿಯೊಬ್ಬರೂ ಸೀರೆಯನ್ನು ಮುಯ್ಯಿ ಮಾಡುವ ಪದ್ಧತಿ ಇದೆ. ಮತ್ತೆ ಅವೇ ಸೀರೆಗಳು ಆಕೆಯ ಮಗುವಿನ ನಾಮಕರಣದಲ್ಲಿ ರಿಬೌಂಡ್ ಹೊಡೆದ ಹಾಗೆ ಕೊಟ್ಟವರಿಗೇ ಸ್ವಲ್ಪ ಅದಲುಬದಲಾಗಿ ವಾಪಸು ಹೋಗಿರುತ್ತವೆ. ಯಾರಾದರೂ ಅದರ ಕವರನ್ನಾದರೂ ಬಿಚ್ಚಿ ನೋಡಿರುತ್ತಾರಾ ಎನ್ನುವುದು ಅನುಮಾನವೇ! ಮತ್ತೆ ಅದೇ ಸೀರೆ ಕವರು ಬೇರೆಯವರ ಸೀಮಂತಕ್ಕೆ ಕೊಡಲು ರೆಡಿಯಾಗುತ್ತದೆ. ಮನೆಯಲ್ಲಿ ಒಂದು ಬೀರು ಈ ತರಹದ ಖೋಖೋ ಸೀರೆ, ಬ್ಲೌಸುಗಳಿಗೆಂದೇ ಮೀಸಲಿಟ್ಟಿರುತ್ತದೆ. ಫಂಕ್ಷನ್ನು ಬಂತೋ, ಅದರಲ್ಲಿರುವ ಒಂದು ಕವರನ್ನು ಎಳೆಯುವುದು, ಒಯ್ಯುವುದು ಅಷ್ಟೇ. ನೋಡಲೇಬೇಕೆಂದಿಲ್ಲ.

ಮೊನ್ನೆ ಯಾವುದೋ ಊರಿನಲ್ಲಿ ಎಲೆಕ್ಷನ್ ಸಮಯದಲ್ಲಿ ಮನೆಮನೆಗೆ ಸೀರೆ ಹಂಚುವಾಗ 'ಈ ಸೀರೆ ಬದಲು ಲೋಟಾನೋ ತಟ್ಟೆನೋ ಕೊಡೋ ಯಪ್ಪಾ, ನಾಕು ದಿನ ಬಾಳ್ಕೆನಾದ್ರೂ ಬರ್ತಾವೆ' ಅಂತಾ ಕೆಲ ಹಿರಿಯ ಹೆಣ್ಣುಮಕ್ಕಳು ಗೋಗರೆಯುತ್ತಿದ್ದರಂತೆ ಎನ್ನುವುದನ್ನು ಕೇಳಿದಾಗ, ಪಾಪ ಹೆಣ್ಣುಮಕ್ಕಳು ಈ ಪಾಟಿ ಸೀರೆ ಬೇಡಾ ಎಂದು ರೋದಿಸುವ ಕಾಲ ಬಂತಲ್ಲಾ ಎಂದು ನಗು ಬಂತು.

ಸೀರೆ ಬೇಡಾ ಎಂದು ರೋಸಿರುವ ಹೆಣ್ಣುಮಕ್ಕಳ ನಡುವೆ ಇಂತಹ ಸೀರೆಗಳನ್ನು ಜಾಣತನದಿಂದ ಉಪಯೋಗಿಸುವ ಹೆಣ್ಣುಮಕ್ಕಳೂ ಇದ್ದಾರೆ. ಪ್ರವಾಸ, ತೀರ್ಥಯಾತ್ರೆಗಳಂತಹ ಸಂದರ್ಭಗಳಲ್ಲಿ ಈ ತರಹದ ಸೀರೆಗಳನ್ನು ಉಟ್ಟುಕೊಂಡು ಹೋಗಿ ಎಲ್ಲೆಲ್ಲಿ ಸ್ನಾನ ಮಾಡುತ್ತಾರೋ ಅಲ್ಲಲ್ಲೇ ಬಿಟ್ಟು ಬರುವುದುಂಟು. ಒಗೆಯುವುದೂ ತಪ್ಪುತ್ತದೆ, ಲಗೇಜೂ ಕಡಿಮೆಯಾಗುತ್ತದೆ. ಯಾವುದಾದರೊಂದು ಬಟ್ಟೆ ಬಿಟ್ಟು ಬರಬೇಕೆಂಬ ನಿಯಮವೂ ಪಾಲನೆಯಾಗುತ್ತದೆ. ಒಂದೇ ಬಾಣ, ಮೂರು ಹಕ್ಕಿ. ಸೀರೆಯ ವಿಲೇವಾರಿಗೆ ಇದೊಂದು ರೀತಿಯ ಐಡಿಯಾ ಚೆನ್ನಾಗಿದೆ ಅಲ್ವಾ?

ಪ್ರತಿಕ್ರಿಯಿಸಿ: feedback@sudha.co.in